ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ

ಸಿಸಿ ನಂ. 420/**13**

**ಪಿಡಬ್ಲ್ಯೂ: 1** **ಸಿಡಬ್ಲೂ : 1**

| | |
|---|---|
| ಸಾಕ್ಷಿದಾರನ ಹೆಸರು | **ವಿ ಜೀವನ್‌ಕುಮಾರ್** |
| ತಂದೆಯ ಹೆಸರು | ದೇವರಾಜು |
| ವಯಸ್ಸು | 49 ವರ್ಷ |
| ಉದ್ಯೋಗ | ರಾಷ್ಟ್ರೀಯ ಪರಿಷತ್ ಸಂಸ್ಥೆಯ ಪ್ರತಿನಿಧಿ |
| ವಾಸ ಸ್ಥಳ | ಎಸ್ ಎಸ್ ಘಾಟಿ |

ಈ ದಿನ ದಿನಾಂಕ 03-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

2 ಮತ್ತು 5ನೇ ಆರೋಪಿತರು ಗೈರು ಹಾಜರಾಗಿದ್ದು ಅವರನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರಿಲ್ಲ ಎಂದು ತಿಳಿಸಿರುತ್ತಾರೆ.

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದ:

ಚಾಸ-2 ರಿಂದ 5 ರವರು ಗೊತ್ತು, ಆರೋಪಿತರು ಗೊತ್ತು, ದಿನಾಂಕ 18-07-2012 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ನಾನು ನನ್ನ ಸರ್ವೆ ನಂ 101 ರ ಜಮೀನಿನಲ್ಲಿದ್ದಾಗ ಬಸವರಾಜು ಮತ್ತು ಓಬದೇನಹಳ್ಳಿ ಮುನಿಯಪ್ಪ ಹಾಗೂ ಅವರೊಂದಿಗಿದ್ದ 5 ಜನರು ಅತಿಕ್ರಮವಾಗಿ ಟ್ರ್ಯಾಕ್ಟರ್ ತೆಗೆದುಕೊಂಡು ಬಂದು ಉಳುಮೆ ಮಾಡಲು ಬಂದಿರುತ್ತಾರೆ. ಮೇಲೆ ಹೇಳಿದಂತಹ ಜನರು ಇಂಡಿಕಾ, ಕ್ವಾಲೀಸ್ ಹಾಗೂ ಒಂದು ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಸದರಿ ವಾಹನಗಳ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ, ಮೇಲೆ ಹೇಳಿದಂತಹ ಜನರು ಬಂದು ಸರ್ವೆ ನಂ 101 ರ ಜಮೀನನ್ನು ಉಳುಮೆ ಮಾಡಿರುತ್ತಾರೆ. ಸದರಿ ಜಮೀನು ರಾಷ್ಟ್ರೋತ್ಥಾನ ಪರಿಷತ್ ಸಂಸ್ಥೆಗೆ ಸೇರಿದಾಗಿರುತ್ತದೆ. ನಾನು ಮತ್ತು ನಮ್ಮ ಕಾರ್ಮಿಕರಾದ ಲಕ್ಷ್ಮೀಕಾಂತರಾಜು, ಗಂಗರಾಜು ಮತ್ತು ರಾಜಣ್ಣರವರು ಬಸವರಾಜು ಮತ್ತು

ಮುನಿಯಪ್ಪರವರನ್ನು ಉಳುಮೆ ಮಾಡುತ್ತಿದ್ದ ಬಗ್ಗೆ ಪ್ರಶ್ನೆ ಮಾಡಿರುತ್ತೇವೆ. ನಾವು ಪ್ರಶ್ನಿಸಿದ್ದಕ್ಕೆ ಮೇಲೆ ಹೇಳಿದ ಜನರು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. ಮೇಲೆ ಹೇಳಿದಂತಹ ಜನರು ನನ್ನ ಕೈ-ಕಾಲುಗಳನ್ನು ಕತ್ತರಿಸಿ ಹಾಕುತ್ತೇವೆ, ಇದೇ ಜಮೀನಿನಲ್ಲಿ ಪ್ರಾಣ ಸಹಿತ ಊತು ಹಾಕುತ್ತೇವೆಂದು ಹೇಳಿ ಹೊಡೆಯಲು ಬಂದಿರುತ್ತಾರೆ. ಮೇಲೆ ಹೇಳಿದ ಜನರ ಪೈಕಿ ಡಿ. ಕ್ರಾಸ್ ಬಸವರಾಜುರವರು ನಾನೇ ಖುದ್ದು ನಿನ್ನನ್ನು ಮುಗಿಸುತ್ತೇನೆಂದು ಹೇಳಿರುತ್ತಾರೆ. ಆ ನಂತರ ತಕ್ಷಣ ನಾನು ಅಲ್ಲಿಂದ ಪೊಲೀಸ್ ಠಾಣೆಗೆ ಬಂದು ಸುಮಾರು 11-00 ಗಂಟೆ ಸಮಯದಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ಅದೇ ದಿನ ಪೊಲೀಸರು ಸುಮಾರು 12-00 ಗಂಟೆಗೆ ಸ್ಥಳಕ್ಕೆ ಬಂದಿದ್ದು ಅಷ್ಟರಲ್ಲಿ ಮೇಲೆ ಹೇಳಿದಂತಹ ಜನರು ಹೊರಟು ಹೋಗಿದ್ದರು. ನಂತರ ಪೊಲೀಸರು ಮಹಜರು ಮಾಡಿರುತ್ತಾರೆ. ಪೊಲೀಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರು ಜರುಗಿಸುವ ಸಮಯದಲ್ಲಿ ನಾನು, ಲಕ್ಷ್ಮಿಕಾಂತ್ ಮತ್ತು ಗಂಗರಾಜು ಹಾಜರಿದ್ದೆವು, ಈ ವಿಚಾರವಾಗಿ ನಾನು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ.

ನಾನು ದೂರಿನೊಂದಿಗೆ ಮೇಲೆ ಹೇಳಿದ ಜಮೀನಿಗೆ ಸಂಬಂಧಿಸಿದ ಪಹಣಿ ಪ ತ್ರಿಕೆಯನ್ನು ನೀಡಿರುತ್ತೇನೆ. ಅಲ್ಲಿ ಸೇರಿದಂತಹ ಜನರು ಒಬ್ಬರಿಗೊಬ್ಬರು ಶಿವು, ಡಿ. ಕ್ರಾಸ್ ಬಸವರಾಜು, ಮಂಜುನಾಥ, ಲೋಕೇಶ, ಓಬದೇನಹಳ್ಳಿ ಮುನಿಯಪ್ಪ, ಕಛೇರಿ ಪಾಳ್ಯದ ಬಸವರಾಜುರವರನ್ನು ಕರೆಯುತ್ತಿದ್ದರು. ಈ ದಿನ ನ್ಯಾಯಾಲಯದ ಮುಂದೆ ಡಿ.ಕ್ರಾಸ್ ಬಸವರಾಜು ಹಾಜರಿದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಇನ್ನಿಬ್ಬರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿಯವರು ಆ ಸಮಯದಲ್ಲಿ ಜಮೀನಿಗೆ ಬಂದಿದ್ದು ಅವರುಗಳ ಹೆಸರನ್ನು ನನಗೆ ಹೇಳಲಾಗುವುದಿಲ್ಲ.

ಮಂಜುನಾಥರವರನ್ನು ಖುದ್ದಾಗಿ ನೋಡಿದರೆ ಗುರುತಿಸುತ್ತೇನೆ. ಆದರೆ ಅವರ ಹೆಸರನ್ನು ಹೇಳಲಾಗುವುದಿಲ್ಲ. ಸದರಿ ಮಂಜುನಾಥರವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿ ಮಂಜುನಾಥರವರ ವಿರುದ್ದ ಬೇರೆ ಪ್ರಕರಣ ದಾಖಲಾಗಿರುತ್ತದೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ದೂರನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಮಹಜರನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ ಕಾರಣ ಪಹಣಿ ಪತ್ರಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎಂ ಕೆ ಎಂ ವಕೀಲರಿಂದಃ**

ಸರ್ವೆ ನಂ 101 ಜಮೀನನ್ನು ನಮಗೆ 2009 ರಲ್ಲಿ ಮಂಜೂರು ಮಾಡಿರುತ್ತಾರೆ. ನಮಗೆ ಸರ್ಕಾರದವರು 34 ಜಮೀನನ್ನು ಮಂಜೂರು ಮಾಡಿರುತ್ತಾರೆ. ಸರ್ವೆ ನಂ 101 ಜಮೀನು ಗೋಮಾಳ ಜಮೀನೆಂದರೆ ಸರಿ. ಸರ್ವೆ ನಂ 101 ರಲ್ಲಿ ಬಸವರಾಜು ಹಾಗೂ ಅವರ ಮಗನಿಗೆ ಮತ್ತು ಇತರೇ ರೈತರಿಗೆ ಸರ್ಕಾರದಿಂದ ಜಮೀನು ಮಂಜೂರಾಗಿರುತ್ತದೆಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನಮ್ಮ ಮತ್ತು 1ನೇ ಆರೋಪಿಯ ನಡುವೆ ಸರ್ವೆ ನಂ 101 ಕ್ಕೆ ಸಂಬಂಧಿಸಿದಂತೆ 3 ದಾವೆಗಳು ಚಾಲ್ತಿಯಲ್ಲಿವೆ ಎಂದರೆ ಸರಿ. ಸರ್ವೆ ನಂ 101 ರಲ್ಲಿ ನಮ್ಮ ಜಮೀನು ಎಲ್ಲಿ ಬರುತ್ತದೆಂಬುದನ್ನು ತಿಳಿದುಕೊಳ್ಳಲು ಸರ್ವೆ ಮಾಡಿಸಿರುತ್ತೇನೆ. ಸದರಿ ಸರ್ವೆ ದಾಖಲಾತಿಯನ್ನು ಪೊಲೀಸರಿಗೆ ನೀಡಿಲ್ಲ. ಉಳುಮೆ ಮಾಡುತ್ತಿದ್ದಂತಹ ರೈತರು ನಾವು ಜಮೀನನ್ನು ಬಿಡಿಸಿಕೊಂಡಿಲ್ಲ. ನಮಗೂ ಮತ್ತು ಉಳುಮೆ ಮಾಡುತ್ತಿದ್ದಂತಹ ರೈತರ

ನಡುವೆ ಜಮೀನಿಗೆ ಸಂಬಂಧಿಸಿದಂತೆ ಈಗಲೂ ವಿವಾದ ನಡೆಯುತ್ತಿದೆ ಎಂದರೆ ಸಾಕ್ಷಿ ರೈತರೊಂದಿಗೆ ವಿವಾದ ಇಲ್ಲ ಅದರೆ 1ನೇ ಅರೋಪಿಯೊಂದಿಗೆ ವಿವಾದ ಇದೆ ಎಂದು ನುಡಿಯುತ್ತಾರೆ. 1ನೇ ಅರೋಪಿ ಹಾಗೂ ಅವರ ಹರಿಡತಿ ನಮ್ಮ ಮೇಲೆ ಸಲ್ಲಿಸಿದಂತಹ ದಾವೆಯಲ್ಲಿ ನಮ್ಮ ವಿರುದ್ದ ಅವರ ಸ್ವಾಧೀನಕ್ಕೆ ತೊಂದರೆ ನೀಡಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಅದೇಶ ಪಡೆದುಕೂಂಡಿರುತ್ತಾರೆಂದರೆ ಸರಿ. ಸದರಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಅದೇಶವನ್ನು ನಾವು ಉಲ್ಲಂಘಿಸಿರುತ್ತೇವೆಂದು ನಮ್ಮ ಮೇಲೆ ಬೇರೆ ಪ್ರಕರಣವನ್ನು ದಾಖಲಾಗಿರುತ್ತದೆಂದರೆ ಸರಿ.

ನಮ್ಮ ಮತ್ತು ಅರೋಪಿತರ ನಡುವೆ ಒಟ್ಟು 3 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು ಅದರ ಒಂದು ಪ್ರಕರಣದಲ್ಲಿ ನಮ್ಮ ಪರವಾಗಿ ಅದೇಶ ಅಗಿರುತ್ತದೆ. ಆ ದಿನ ಜಮೀನಿಗೆ ಬಂದಂತಹ ವಾಹನಗಳ ನೊಂದಣಿ ಸಂಖ್ಯೆಯನ್ನು ನಾನು ಬರೆದುಕೊಂಡಿದ್ದೆ ಸದರಿ ವಾಹನಗಳ ನೊಂದಣಿ ಸಂಖ್ಯೆಗಳನ್ನು ದೂರನ್ನು ನೋಡಿ ಹೇಳಬಲ್ಲೆ. ನನ್ನ ದೂರಿನಲ್ಲಿ ಸದರಿ ವಾಹನಗಳ ನೊಂದಣಿ ಸಂಖ್ಯೆಗಳನ್ನು ನಮೂದಿಸಿರುತ್ತೇನೆ. ಸದರಿ ವಾಹನಗಳ ನೊಂದಣಿ ಸಂಖ್ಯೆಗಳನ್ನು ನನಗೆ ಈಗ ಹೇಳಲಾಗುವುದಿಲ್ಲ. ನಿಪಿ-1 ದೂರನ್ನು ನಾನೇ ಬರೆದಿರುತ್ತೇನೆ. ನನಗೆ ಸೇರಿದ ಎನ್73 ಮೊಬೈಲ್‌ನ್ನು ಅರೋಪಿತರು ಒಡೆದು ಹಾಕಿರುತ್ತಾರೆಂದು ದೂರಿನಲ್ಲಿ ನಮೂದಿಸಿರುತ್ತೇನೆ.

ದೂರಿನಲ್ಲಿ ರಾಜಣ್ಣರವರೂ ಸಹ ಅರೋಪಿತರೊಂದಿಗೆ ಬಂದು ಗಲಾಟೆ ಮಾಡಿರುತ್ತಾರೆಂದು ನಮೂದಿಸಿರುತ್ತೇನೆ. ನನ್ನ ಮರುಹೇಳಿಕೆಯಲ್ಲಿ ಅರೋಪಿತರು ನನ್ನ ಮೊಬೈಲ್‌ನ್ನುಒಡೆದು ಹಾಕಿಲ್ಲ ಹಾಗೂ ರಾಜಣ್ಣರವರು ಗಲಾಟೆ ಮಾಡಿಲ್ಲ ಎಂದು ಮರುಹೇಳಿಕೆ ನೀಡಿರುತ್ತೇನೆಂದರೆ ಸರಿ. 1ನೇ ಪ್ರತಿವಾದಿ ಬಸವರಾಜು ಖುದ್ದಾಗಿ

ನನ್ನನ್ನು ಮುಗಿಸುತ್ತೇನೆಂದು ಹೇಳಿರುತ್ತಾರೆಂದು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳತ್ತಿದ್ದೇನೆಂದರೆ ಸರಿಯಲ್ಲ. 1ನೇ ಅರೋಪಿ ಬಸವರಾಜುರವರು ನನ್ನನ್ನು ಮುಗಿಸುತ್ತೇನೆಂದು ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. 1ನೇ ಅರೋಪಿ ನನಗೆ ಬೆದರಿಕೆ ಹಾಕಿರುತ್ತಾರೆಂದು ದೂರಿನಲ್ಲಿ ಬರೆಸಿರುತ್ತೇನೆ. ನಿಪಿ-1 ರಲ್ಲಿ 1ನೇ ಅರೋಪಿ ಬೆದರಿಕೆ ಹಾಕಿರುತ್ತಾನೆಂದು ನಮೂದಿಸದಿದ್ದರೂ ನಮೂದಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅರೋಪಿತರು ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ ಬಗ್ಗೆ ಕಂದಾಯ ಇಲಾಖೆಯವರು ದಾಖಲಾತಿಯನ್ನು ನೀಡಿಲ್ಲ. ನಾವೇ ಅರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ ಕಾರಣ ನಮ್ಮ ಮೇಲೆ ನ್ಯಾಯಾಲಯದ ಅದೇಶದ ಉಲ್ಲಂಘನೆ ಮಾಡಿದ ಕಾರಣ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ.

2012 ರಲ್ಲಿ ಭಾರತೀಯ ಜನತಾ ಪಕ್ಷ ಸರ್ಕಾರ ಇತ್ತು, ನಮ್ಮದೇ ಸರ್ಕಾರವಿದ್ದ ಕಾರಣ ಅರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇದರ ಪೂರ್ವದಲ್ಲಿ 4 ದೂರುಗಳನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ಸರ್ವೆ ನಂ 101 ರಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿರದಿದ್ದರೂ ಕೂಡ ಅರೋಪಿತರ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಕೂಡ 1 ನೇ ಅರೋಪಿ ಹಾಗೂ ಅವರ ಸಂಗಡಿಗರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಹೇಳುತ್ತಿದ್ದೇನಂದರೆ ಸರಿಯಲ್ಲ. ಚಾಸ-2 ರಿಂದ 4 ರವರು ನಮ್ಮ ರಾಷ್ಟ್ರೋತ್ಥಾನ ಪರಿಷತ್ ಸಂಸ್ಥೆಯ ಕಾರ್ಮಿಕರೆಂದರೆ ಸರಿ.

ಮಹಜರಿನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತು. ಮಹಜರಿನಲ್ಲಿ ಆರೋಪಿತರು ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆಂದು ಬರೆದಿರುತ್ತಾರೆ. ನಿಪಿ-2 ರ ಮಹಜರಿಗೆ ನಾನು, ನಮ್ಮ ಕಾರ್ಮಿಕರಾದ ಲಕ್ಷ್ಮೀಕಾಂತ, ಗಂಗರಾಜು ಸಹಿ ಮಾಡಿರುತ್ತೇವೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ರಾಜಕೀಯ ಪ್ರಭಾವದಿಂದ ಠಾಣೆಯಲ್ಲಿಯೇ ಮಹಜರನ್ನು ತಯಾರಿಸಿರುತ್ತೇವೆಂದರೆ ಸರಿಯಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ನಿಂದಿಸಿಲ್ಲ , ಬೆದರಿಕೆ ಹಾಕರದಿದ್ದರೂ ಕೂಡ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಾವು ನ್ಯಾಯಾಲಯ ನಿಂದನೆ ಮಾಡಿದ ಕಾರಣ ನಮ್ಮ ವಿರುದ್ದ ಪ್ರಕರಣ ದಾಖಲಾಗಿದ್ದು ಸದರಿ ಪ್ರಕರಣಕ್ಕೆ ವಿರುದ್ದವಾಗಿ ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಮಗೂ ಆರೋಪಿತರಿಗೂ ಆಗದ ಕಾರಣ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ

ಪಿ.ಡಬ್ಲೂ 1